## ವಿಜ್ಞಾನ ಮತ್ತು ಸಾಹಿತ್ಯ ಜುಗಲಬಂದಿ

ವಿಜ್ಞಾನ ಹಾಗೂ ಸಾಹಿತ್ಯ ಇವೆರಡು ಭಿನ್ನ ಎಂಬ ಮಾತ್ರಕ್ಕೆ ಒಂದು ಮೇಲು ಮತ್ತೊಂದು ಕೀಳು ಎಂಬ ವರ್ಗೀಕರಣ ಸಲ್ಲದು ಎಂಬ ಅಂಶವು ಮಾರ್ಚ್ 11ರ ಸಂಚಿಕೆಯ 'ವಿಜ್ಞಾನ ಮತ್ತು ಸಾಹಿತ್ಯ ಜಗಳವೋ ಜುಗಲಬಂದಿಯೋ' ಲೇಖನದಲ್ಲಿ ಮನಮುಟ್ಟುವಂತೆ ಮೂಡಿಬಂದಿದೆ. ವಿಜ್ಞಾನ ಮತ್ತು ಸಾಹಿತ್ಯ, ಬೇರೆ ಬೇರೆ ಎಂದು ಕಂಡರೂ ಒಂದು ಇನ್ನೊಂದರ ಶ್ರೀಮಂತಿಕೆಯನ್ನು ಹೆಚ್ಚಿಸಬಲ್ಲದು ಎಂಬ ಸತ್ಯವು ಮುಖಪುಟ ಬರಹಗಳ ಮೂಲಕ ಸ್ಪಷ್ಟವಾಗಿದೆ.

–ಎಡ್ವರ್ಡ್ ರೊಡ್ರಿಗಸ್ ಎಸ್. ಜೆ., ಬೆಂಗಳೂರು



ಒಂಬತ್ತು ಜನ ದಿಗ್ಗಜರು ಬರೆದ ಪ್ರಬುದ್ಧ ಲೇಖನ ಮಾಲೆ 'ವಿಜ್ಞಾನ ಮತ್ತು ಸಾಹಿತ್ಯ ಜುಗಲಬಂದಿಯೋ ಜಗಳಬಂದಿಯೋ' ಅದ್ಭುತವಾಗಿದೆ. ವಿಜ್ಞಾನ ಮತ್ತು ಸಾಹಿತ್ಯ ಹೇಗೆ ಬದುಕಿನ ಒಳಹೊರಗೆ ಸೇರಿಕೊಂಡಿದೆ ಅನ್ನುವುದನ್ನು ತೋರಿಸುತ್ತದೆ.

–ವಿನುತಾ ಹಂಚಿನಮನಿ, ಧಾರವಾಡ

ವಿಜ್ಞಾನದ ಜ್ಞಾನದೊಂದಿಗೆ ಸಾಹಿತ್ಯ ಹೊಮ್ಮಿದರೆ ಅದರ ಸ್ವಾದವೇ ಬೇರೆ ಎಂಬುದನ್ನು ಮುಖಪುಟ ಲೇಖನ ನಮಗೆ ತೋರಿಸಿಕೊಟ್ಟಿದೆ. ಆಯಾ ಕಾಲಕ್ಕೆ ಬೇಕಾದ ಶಿಕ್ಷಣ, ಅಗತ್ಯಗಳನ್ನು ಮಕ್ಕಳಿಗೆ ಪೂರೈಸಬೇಕಾದ ಸಾರ ಹೇಳುವ ಸ್ವಯಂಪ್ರಭಾರವರ ಲೇಖನ ಚೆನ್ನಾಗಿದೆ.

–ಸಾವಿತ್ರಿ ಶ್ಯಾನುಭಾಗ್, ಕುಂದಾಪುರ

## ಹಿಂಸೆಯ ಸಂಸಾರ

'ಮದುವೆ ಹಿಂಸೆಯಾದಾಗ ವಿಚ್ಛೇದನವೇ ಸೂಕ್ತ' ಲೇ. ಸೌಮ್ಯಲಕ್ಷ್ಮೀ ಕುಕ್ಕಜೆ ಅವರ ಲೇಖನ (ಮಾ. 4)ಗಮನಾರ್ಹ. ಆದರೆ, ವಿಚ್ಛೇದನವೇ ಅಂತಿಮವಾಗಬಾರದು. ಅದರಲ್ಲೂ, ಪ್ರೀತಿಸಿ ಮದುವೆಯಾದ ಗಂಡ ಹೆಂಡತಿಯರಲ್ಲಿ ಗೌರವ, ನಂಬಿಕೆ, ವಿಶ್ವಾಸ ಅದಕ್ಕಿಂತ ಮುಖ್ಯವಾಗಿ ಪರಸ್ಪರ ಅರಿವು ಮುಖ್ಯ. ತಮ್ಮ ಸಂತೋಷಕ್ಕೆ ಹುಟ್ಟಿದ ಮಕ್ಕಳ ಬಗ್ಗೆ ಚಿಂತಿತರಾದರೆ ಒಳ್ಳೆಯದು.

–ಬಾಣಾವರ ನಾಗರಾಜ, ಬೆಂಗಳೂರು

ಮದುವೆ ಮತ್ತು ಗಂಡ, ಹೆಂಡತಿಯ ಸಂಬಂಧ ಇತ್ತೀಚೆಗೆ ಬಹಳ ಬದಲಾವಣೆ ಕಂಡಿದೆ. ಇಬ್ಬರೂ ಒಟ್ಟಿಗೇ ಬಾಳಬೇಕಾದ ಅನಿವಾರ್ಯ ಇಲ್ಲ. ಹಾಗಾಗಿ ವಿಚ್ಛೇದನಗಳು ಹೆಚ್ಚಿವೆ. ಅದರಲ್ಲಿಯೂ ಸ್ವತಂತ್ರ ಬದುಕು ಕಟ್ಟಿಕೊಂಡಿರುವ ವಿದ್ಯಾವಂತರಿಗಂತೂ ಸಂಸಾರದ ಹೊರತಾಗಿ ಒಬ್ಬಂಟಿ ಬದುಕುವುದೂ ಅಶಕ್ಯವಲ್ಲ. ಆದರೆ ಅವರ ಮಕ್ಕಳ ಭವಿಷ್ಯ ನಿಜಕ್ಕೂ ಆತಂಕಕಾರಿಯಾಗಿರುತ್ತದೆ.

–ವೀಣಾ ಟಿ.ಆರ್.



## ಉತ್ತಮ ಕಥೆ 'ಉಲ್ಲಂಘನೆ'

ಮಾ. 4ರ ಸಂಚಿಕೆಯಲ್ಲಿ ಕಲ್ಲೇಶ್ ಕಂಬಾರ ಅವರು ಬರೆದಿರುವ 'ಉಲ್ಲಂಘನೆ' ಕಥೆ ತುಂಬ ಶಕ್ತಿಯುತವಾಗಿದೆ. ಅಂತ್ಯವೂ ಅಷ್ಟೇ ಪರಿಣಾಮಕಾರಿಯಾಗಿದೆ. ಈ ಕಥೆ ನನಗೆ ಖ್ಯಾತ ಬರಹಗಾರ ಓ ಹೆನ್ರಿಯನ್ನು ನೆನಪಿಸಿತು.

–ಓಂ ಪ್ರಕಾಶ್, ಬೆಂಗಳೂರು

'ಉಲ್ಲಂಘನೆ' ಮನೋಜ್ಞವಾಗಿದೆ. ಭಾಷೆ ಸರಾಗವಾಗಿ ಓದಿಸಿಕೊಂಡಿತು.

–ರಾಜಶೇಖರ ಗೌಡ, ಕೊಟ್ಟೂರು

ಎಲ್ಲರ ಸಹನೆಗೂ ಮಿತಿ ಇರುತ್ತದೆ. ಹಸಿವು, ಬಡತನದಿಂದ ಮೊದಲೇ ಕಂಗೆಟ್ಟು ಕೂತಿದ್ದ ಮಲ್ಲವ್ವ ಮಾಡಿದ್ದು. ಕಾನೂನಿನ ಕಣ್ಣಿನಲ್ಲಿ ಅಪರಾಧವೇ ಆದರೂ ತನ್ನ ಮತ್ತು ಮಗುವಿನ ಭವಿಷ್ಯಕ್ಕೆ ತಕ್ಕ ನಿರ್ಧಾರ.

–ವಿಜಯ ಪ್ರಸಾದ್

ಕಥೆಯಲ್ಲಿ ಉತ್ತರ ಕರ್ನಾಟಕ ಭಾಷಾ ಶೈಲಿ ಚೆನ್ನಾಗಿ ಮೂಡಿಬಂದಿದೆ.

–ಬಿ.ಎಸ್. ಮುಳ್ಳೂರ, ಹಲಗತ್ತಿ

## ಎರಡು ಲೇಖನಗಳು

ಫೆ. 18ರ ಸಂಚಿಕೆಯಲ್ಲಿ 'ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ'ದ ಲೇಖನಗಳಲ್ಲಿ ('ಹೂ ಮನಸಿನ ಮೇಲೆ ಮುಳ್ಳಿನ ಗೀರು', ಸೌಮ್ಯಲಕ್ಷ್ಮಿ ಕುಕ್ಕಜೆ ಹಾಗೂ 'ಮುದುಡಿದ ಮನ ಅರಳುವುದೇ?' (ಕೆ.ಎಸ್. ಶುಭ್ರತಾ) ಓದಿದೆ.

ಕೆ.ಎಸ್. ಶುಭ್ರತಾ ಲೇಖನದ ಇಂಟ್ರೊದಲ್ಲಿ ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯದ ಪರಿಣಾಮದ ಕುರಿತು ಹೇಳುತ್ತ, 'ಇದು ಮುಂದೆ ಮಗುವಿನ ಮಾನಸಿಕ ಬೆಳವಣಿಗೆಗೆ ಕಾರಣವಾಗುತ್ತದೆ' ಎಂದು ಬರೆಯಲಾಗಿದೆ. ಇದು ತಪ್ಪು ಸಂದೇಶವನ್ನು ಕೊಡುತ್ತದೆ. ಅದು, 'ಮಗುವಿನ ಮಾನಸಿಕ ಬೆಳವಣಿಗೆಗೆ ಮಾರಕವಾಗುತ್ತದೆ' ಎಂದಾಗಬಹುದಿತ್ತು.

ಸೌಮ್ಯಲಕ್ಷ್ಮಿ ಅವರ ಲೇಖನದಲ್ಲಿ 'ಪೋಕ್ಸೊ' (pocso ಪ್ರೊಟೆಕ್ಷನ್ ಆಫ್ ಚಿಲ್ಡ್ರನ್ ಫ್ರಮ್ ಸೆಕ್ಷುವಲ್ ಅಫೆನ್ಸಸ್) ಕಾನೂನು 'ಪೊಸ್ಕೊ' (posco) ಎಂದು ತಪ್ಪಾಗಿ ಮುದ್ರಿತವಾಗಿದೆ. 'ಸಿಎಸ್' (ದಿ ಚೈಲ್ಡ್ ಸೆಕ್ಷುವಲ್ ಅಸಾಲ್ಟ್ ಅಥವಾ ಅಬ್ಯೂಸ್) ಬಗ್ಗೆ ಸರಿಯಾದ ಮಾಹಿತಿ ನೀಡಿಲ್ಲ. 2016ರ ಜನವರಿಯಲ್ಲಿ ತಿದ್ದುಪಡಿಗೊಂಡ 'ಜುವೆನೈಲ್ ಜಸ್ಟಿಸ್ ಆಕ್ಟ್' ಪ್ರಕಾರ 16 ರಿಂದ 18 ವಯಸ್ಸಿನ ಲೈಂಗಿಕ ದೌರ್ಜನ್ಯದ ಆಪಾದಿತರನ್ನು ಕೆಲವೊಮ್ಮೆ 'ಅಡಲ್ಟ್ ಕ್ರಿಮಿನಲ್ ಜಸ್ಟಿಸ್ ಸಿಸ್ಟಮ್'ಗೆ ನಿರ್ದೇಶಿಸಲಾಗುತ್ತದೆ.

–ಡಾ. ವೀಣಾ ಭಾರತಿ, ಬೆಂಗಳೂರು

## ಹಾಸ್ಯವೋ ಅಪಹಾಸ್ಯವೋ?

ಮಾ. 4ರ ಸಂಚಿಕೆಯಲ್ಲಿನ 'ನೀವು ಕೇಳಿದಿರಿ' ವಿಭಾಗದಲ್ಲಿನ ಪಿ. ಚಿದಾನಂದ ಅವರ, ಗಾಂಧೀಜಿ ಹೆಸರಿನ ರಸ್ತೆಗಳಲ್ಲಿ ಇರುವ ಮದ್ಯದ ಅಂಗಡಿ ಕುರಿತ ಪ್ರಶ್ನೆಗೆ ರಾಮ್ ನೀಡಿದ ಉತ್ತರ ಮನಸ್ಸಿಗೆ ಅಹಿತಕರವೆನಿಸಿತು. ಕಾರಣ ಗಾಂಧೀಜಿಯ ಆಶಯಕ್ಕೆ ವಿರುದ್ಧವಾದ, ತಿರುಚಿದ ಉತ್ತರದಂತಿದೆಯಲ್ಲದೆ? ಗಾಂಧೀಜಿಯವರ ಇಮೇಜಿಗೆ ಧಕ್ಕೆ ತರುವಂತಿದೆ. ಹಾಸ್ಯವೂ ಅಪಹಾಸ್ಯವಾಗಬಾರದಲ್ಲವೆ?

–ಕೆ. ಭಾಸ್ಕರ್ ಮಕ್ಕಿ ತಾಯ, ತುಮಕೂರು

## ಮನೆಗಳ ಮಾಯಾಲೋಕ

ಮಾ. 4ರ ಸಂಚಿಕೆಯಲ್ಲಿ ಜಿ. ನಾಗೇಂದ್ರ ಅವರು ಬರೆದಿರುವ 'ಬಣ್ಣ ಬಣ್ಣದ ಮನೆಗಳ ಮಾಯಾಲೋಕ' ಕುತೂಹಲಕಾರಿಯಾಗಿದೆ. ನೂರಿನ್ನೂರು ವರ್ಷಗಳ ಹಿಂದೆ ಕಟ್ಟಿದ ಮನೆಗಳು ಇಂದಿಗೂ ಪ್ರವಾಸಿಗರ ಆಕರ್ಷಣೆಯ ತಾಣಗಳಾಗಿವೆ ಎಂದರೆ ಆಶ್ಚರ್ಯ ಅಲ್ಲವೇ!

–ರಘುನಾಥರಾವ್ ತಾಪ್ಸೆ, ದಾವಣಗೆರೆ

## ಅಶ್ವಿನ್ ನಕ್ಷತ್ರ

ಮಾ. 4ರ ಸಂಚಿಕೆಯಲ್ಲಿ ವಿಶಾಖ ಎನ್. ಬರೆದಿರುವ 'ಅಶ್ವಿನ್ ನಕ್ಷತ್ರ' ಲೇಖನ ಓದುತ್ತಿರುವಾಗ ನಾನು ಈಚೆಗೆ ನಡೆದ ಸಿಡ್ನಿ ಟೆಸ್ಟ್ ಮ್ಯಾಚ್ ಹೋಗಿ ನೋಡಿದ್ದು ನೆನಪಾಯ್ತು. ಚೆನ್ನೈನಲ್ಲಿ ನಡೆದ ಎರಡನೇ ಟೆಸ್ಟ್‌ನಲ್ಲಿಯೂ, ಅಶ್ವಿನ್ ಭರ್ಜರಿ ಶತಕ, ಐದು ವಿಕೆಟ್‌ಗಳನ್ನು ಗಳಿಸಿದ್ದು ನಿಜಕ್ಕೂ ಅದ್ಭುತ.

–ಸೀತಾ ಕೇಶವ, ಸಿಡ್ನಿ

## ...ಹಿರಿಯರ ಕೈ

ಫೆ. 25ರ ಸಂಚಿಕೆಯ ಪಾಲನೆ–ಪೋಷಣೆ ಅಂಕಣದಲ್ಲಿ ಸ್ವಯಂಪ್ರಭಾ ಅವರು ಬರೆದಿರುವ 'ನಮ್ಮ ನೆತ್ತಿಯಮೇಲೆ ಹಿರಿಯರ ಕೈ' ಲೇಖನ ತುಂಬ ಚೆನ್ನಾಗಿತ್ತು.

–ಕಮರ್, ಮಡಿಕೇರಿ

'ನಮ್ಮ ನೆತ್ತಿಯ ಮೇಲೆ ಹಿರಿಯರ ಹರಕೆಯ ಕೈ' ಲೇಖನ ಚೆನ್ನಾಗಿದೆ. ನಾನು 8 ವರ್ಷದವನಿದ್ದಾಗ ನಮ್ಮ ಗ್ರಾಮದ ಬಡ ವಿದ್ಯಾರ್ಥಿಯೊಬ್ಬನಿಗೆ ಇಂಜಿನಿಯರಿಂಗ್ ಕಾಲೇಜಿನಲ್ಲಿ ಸೀಟ್ ಸಿಕ್ಕಾಗ ನಮ್ಮ ತಂದೆ ಹಣಕಾಸು ಸಹಾಯ ಮಾಡಿದ್ದರು, ಈಗ ನಾನೂ ಬಡ ವಿದ್ಯಾರ್ಥಿಗಳಿಗೆ ಸಹಾಯ ಮಾಡುತ್ತಿದ್ದೇನೆ. ಹಿರಿಯರು ತೋರಿಸಿದ ಹಾದಿಯಲ್ಲಿ ನಾವು ನಡೆಯಬೇಕು. ಈ ನಿಟ್ಟಿನಲ್ಲಿ ಲೇಖನ ದಾರಿದೀಪ ನೀಡಿದೆ.

–ಚಂದ್ರಕಾಂತ ಭಂಡಾರೆ, ಸುರಪುರ

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in